**ಒಟ್ಟಾರೆ ಶೇಖರವಾಗುತ್ತಿರುವ ಇ–ತ್ಯಾಜ್ಯದಲ್ಲಿ ಶೇಕಡಾ 70ರಷ್ಟು ಪಾಲು ಸರ್ಕಾರಿ, ಸಾರ್ವಜನಿಕ ಮತ್ತು ಖಾಸಗಿ ಕೈಗಾರಿಕೆಗಳದ್ದು! ಗೃಹ ಬಳಕೆಯಿಂದ ಶೇಕಡಾ 15ರಷ್ಟು ಪ್ರಮಾಣದ ಇ–ತ್ಯಾಜ್ಯ ಉತ್ಪಾದನೆ ಆಗುತ್ತಿದೆ.**

ನಿಯಂತ್ರಣ ಮಂಡಳಿಯಿಂದ ಪರವಾನಗಿ ಪಡೆಯಬೇಕು. ಬಳಕೆದಾರರು ಅಧಿಕೃತ ಸಂಗ್ರಹಣಾ ಕೇಂದ್ರಗಳಿಗೆ ತ್ಯಾಜ್ಯವನ್ನು ಹಿಂದಿರುಗಿಸಬೇಕು. ಶಿಕ್ಷಣ ಸಂಸ್ಥೆಗಳು ವಾರ್ಷಿಕ ‘ಇ–ಕಸ’ದ ಉತ್ಪಾದನೆಯ ವಿವರ ನೀಡಬೇಕು. ಆದರೆ, ಈ ಯಾವ ನಿಯಮಗಳೂ ಇಲ್ಲಿ ಅನುಷ್ಠಾನಗೊಂಡಿಲ್ಲ.

ಕೇಂದ್ರ ಸರ್ಕಾರದ ಅರಣ್ಯ ಮತ್ತು ಪರಿಸರ ಇಲಾಖೆ 2016ರಲ್ಲಿ ಕೆಲವು ನಿಯಮಗಳನ್ನು ರೂಪಿಸಿದೆ. ಅವುಗಳ ಅನುಷ್ಠಾನದ ಹೊಣೆಯನ್ನು ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗೆ ವಹಿಸಿದೆ. ಎಲೆಕ್ಟ್ರಾನಿಕ್ ಮತ್ತು ಎಲೆಕ್ಟ್ರಿಕಲ್ ಉಪಕರಣಗಳನ್ನು ಬಳಸುವ ಗ್ರಾಹಕ ಹಾಗೂ ಅವುಗಳನ್ನು ಬೃಹತ್ ಪ್ರಮಾಣದಲ್ಲಿ ಬಿಕರಿ ಮಾಡುವ ವ್ಯಾಪಾರಿ, ಉಪಕರಣಗಳ ತಯಾರಕ ಹಾಗೂ ಇ–ತ್ಯಾಜ್ಯ ಸಂಸ್ಕರಣೆದಾರರು ಈ ನಿಯಮಗಳ ವ್ಯಾಪ್ತಿಗೆ ಬರುತ್ತಾರೆ.




# ಬೆಂಗಳೂರಿನ ಸಾಹಸ




ಬೆಂಗಳೂರು ನಗರದ ದಕ್ಷಿಣ ಭಾಗದಲ್ಲಿದ್ದರೆ, ಇ–ತ್ಯಾಜ್ಯ (ಎಲೆಕ್ಟ್ರಾನಿಕ್ ತ್ಯಾಜ್ಯ) ವಿಲೇವಾರಿ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಹತ್ತಿರದ ‘ಬೆಂಗಳೂರು ಒನ್’ ಕೇಂದ್ರ ಅಥವಾ ಅಂಚೆ ಕಚೇರಿಗೆ ಹೋಗಿ ಅವುಗಳನ್ನು ವಿಲೇವಾರಿ ಮಾಡಬಹುದು.

ದಶಕಗಳಿಂದ ತ್ಯಾಜ್ಯ ನಿರ್ವಹಣೆ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಎನ್ವಿರಾನ್ಮೆಂಟಲ್ ಸಿನರ್ಜಿಸ್ ಇನ್ ಡೆವಲಪ್‌ಮೆಂಟ್ (ಎನ್‌ಸೈಡ್) ಮತ್ತು ಸಾಹಸ್ ಸಂಸ್ಥೆಗಳು ಇ–ತ್ಯಾಜ್ಯ ಸಂಗ್ರಹಕ್ಕೆ ರಚನಾತ್ಮಕ ಹೆಜ್ಜೆ ಇಟ್ಟಿವೆ. ಸದ್ಯ ಬೆಂಗಳೂರು ದಕ್ಷಿಣ ಭಾಗದಲ್ಲಿ ಇ–ಕಸಗಳನ್ನು ಸಂಗ್ರಹಿಸುವ ಈ ಹೊಸ ವ್ಯವಸ್ಥೆ ಜಾರಿಗೆ ಬಂದಿದೆ. ಒಟ್ಟು 9 ಬೆಂಗಳೂರು ಒನ್ ಸೆಂಟರ್‌ಗಳು ಮತ್ತು 6 ಅಂಚೆ ಕಚೇರಿಗಳಲ್ಲಿ (ಜಯನಗರ, ಬನಶಂಕರಿ, ಜೆ.ಪಿ.ನಗರ, ಆರಕೆರೆ, ಕೋರಮಂಗಲ, ಬಿಟಿಎಂ ಲೇಔಟ್) ‘ಡ್ರಾಪ್‌ಬಾಕ್ಸ್’ ಇರಿಸಿ ತ್ಯಾಜ್ಯ ಸಂಗ್ರಹಿಸಲಾಗುತ್ತಿದೆ.

ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳು ಆಯಾ ಬಡಾವಣೆಯ ಇ–ತ್ಯಾಜ್ಯವನ್ನು